ದಿನಾಂಕಃ 21.02.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎನ್.ಎಸ್.ಜೆ. ವಕೀಲರಿಂದ:

ನಾನು ಬಿ.ಹೊಸಹಳ್ಳಿ ಮತ್ತು ಬಂಕೇನಹಳ್ಳಿಯ ಗಡಿ ಸ್ಥಳದ ವಾಸಿ. ನನ್ನ ಮನೆಯಿಂದ ದಾವ ಸ್ವತ್ತಿಗೆ ಅರ್ಧ ಕಿ.ಮೀ ಅಂತರ ಇದೆ. ದಾವ ಸ.ನಂ. ನಲ್ಲಿ 15 ಗುಂಟೆ 'ಬಿ' ಕರಾಬು ಹಾಗೂ 1 ಎಕರೆ 13 ಗುಂಟೆ 'ಎ' ಕರಾಬು ಜಮೀನು ಇದೆ. ದಾವ ಜಮೀನಿನ ಬಗ್ಗೆ ನನಗೆ ಮಾಹಿತಿ ಇದೆ. ಒಟ್ಟು 19 ಗುಂಟೆ ವಿಸ್ತೀರ್ಣದ ಜಮೀನಿಗೆ ವಾದಿ ಈ ದಾವೆಯನ್ನು ಸಲ್ಲಿಸಿದ್ದಾರೆ. ಆ ಜಮೀನಿನ ಪೂರ್ವಕ್ಕೆ ಸ.ನಂ.399, ಪಶ್ಚಿಮಕ್ಕೆ ಸರ್ಕಾರಿ ರಸ್ತೆ, ಉತ್ತರಕ್ಕೆ ಸ.ನಂ.401/1, ಸ.ನಂ.1 ಮತ್ತು 2 ರ ಜಮೀನು, ದಕ್ಷಿಣಕ್ಕೆ ಸ.ನಂ.410/3 ರ ಜಮೀನು ಇದೆ. ಈ ಚೆಕ್ಕುಬಂದಿಯೊಳಗಿರುವ ಜಮೀನಿನ ಪೈಕಿ ರಸ್ತೆಗೆಂದು 5 ಗುಂಟೆ ಜಮೀನು ಇದೆಯಾ ಎಂದರೆ ಸಾಕ್ಷಿಯು ಸರ್ಕಾರಿ ರಸ್ತೆಗೆ ಮೀಸಲಾಗಿದೆ ಎಂದು ನುಡಿಯುತ್ತಾರೆ. ಸಾಕ್ಷಿಯು ಸ್ವತಃ ವಾದಿಯ ಜಮೀನಿನಲ್ಲಿ ಯಾವುದೇ ರಸ್ತೆ ಇಲ್ಲ ಎಂದು ನುಡಿಯುತ್ತಾರೆ. ನಾನು ಹೇಳಿದ 19 ಗುಂಟೆ ಜಮೀನು 'ಬಿ' ಕರಾಬು ಜಮೀನಾಗಿದೆ. ದಾವ ಸ್ವತ್ತಿನ ಹಿಂಬದಿಯಲ್ಲಿ ತರಿಗದ್ದೆಗಳು ಇವೆ ಎಂದರೆ ಸರಿ. ಅವು ದಾವ ಸ್ವತ್ತಿನ ಪೂರ್ವ ದಿಕ್ಕಿಗೆ ಇದೆ. ಅಲ್ಲಿ 25-30 ರ ಜನರ ತರಿಗದ್ದೆಗಳು ಇರಬಹುದು.

ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ದಾವ ಸ್ವತ್ತಿನ ಪಶ್ಚಿಮ ದಿಕ್ಕಿಗೆ ರಸ್ತೆ ಇದೆ ಎಂದು ತೋರಿಸಲಾಗಿದೆ ಎಂದರೆ ಸಾಕ್ಷಿಯು ಅದು ಸರ್ಕಾರಿ ರಸ್ತೆಯಾಗಿದ್ದು ವಾದಿಯ ಜಮೀನಿನ ಹೊರಭಾಗದಲ್ಲಿ ಇದೆ ಎಂದು ನುಡಿಯುತ್ತಾರೆ. ವಾದಿಯ ಜಮೀನಿನಲ್ಲಿ ಇರುವ 'ಬಿ' ಕರಾಬು ಜಮೀನಿನಲ್ಲಿ ಧರೆ, ಗುಂಡಿ ಮತ್ತು ಕೊರಕಲು ಇದೆ. ದಾವ ಸ.ನಂ. ಜಮೀನಿನಲ್ಲಿ 8 ಗುಂಟೆ ಜಮೀನು ಮನೆಗೆಂದು ಭೂಪರಿವರ್ತನೆ ಮಾಡಿಸಲಾಗಿದೆ. ದಾವ ಜಮೀನಿನ ನಕಾಶೆಯನ್ನು ನಾನು ನೋಡಿಲ್ಲ. ಈಗ ನೋಡುತ್ತಿರುವ ನಿಪಿ-6 ರ ದಾಖಲೆಯಲ್ಲಿ ಸ.ನಂ.410/2 ರ ಒಳಗೆ ರಸ್ತೆ ಹಾದುಹೋಗಿದೆ ಎಂದರೆ ಸಾಕ್ಷಿಯು ಆ ರೀತಿ ಯಾವುದೇ ರಸ್ತೆ ಇಲ್ಲ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರಕ್ಕೆ ನಾನೇ ಮಾಹಿತಿ ನೀಡಿದ್ದೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ದಾವ ಜಮೀನಿನಲ್ಲಿ ಇರುವ ಕರಾಬು ಜಮೀನಿನಲ್ಲಿ ರಸ್ತೆ ಹಾದುಹೋಗಿದೆ ಎಂದು ಹೇಳಿದ್ದೇನೆ ಎಂದರೆ ಸರಿ.

ಗ್ರಾಮಪಂಚಾಯಿತಿಯವರು ಜೆಲ್ಲಿ ರಸ್ತೆ ಮಾಡಿದ್ದು ಅದು ಉಪಯೋಗದಲ್ಲಿ ಇದೆ ಎಂದರೆ ಸಾಕ್ಷಿಯು ಪಂಚಾಯಿತಿಯವರು ರಸ್ತೆ ಮಾಡಲು ಬಂದಾಗ ವಾದಿ ತಡೆದಿದ್ದಾರೆ ಎಂದು ನುಡಿಯುತ್ತಾರೆ. ವಾದಿಯ ಗಂಡ ಮತ್ತು ಮಾದವಗೌಡ ರವರ ಮನೆ ಅಕ್ಕಪಕ್ಕದಲ್ಲಿ ಇದೆ ಎಂದರೆ ಸರಿ. ಸದರಿ ಮನೆಗಳ ನಡುವೆ ಇರುವ ದಾರಿಯ ಮೂಲಕ ಜನರು ಕೃಷಿ ಮಾಡಲು ತಿರುಗಾಡುತ್ತಾರೆ ಎಂದರೆ ಸರಿಯಲ್ಲ. ಆ ರಸ್ತೆಗೆ ಲಗತ್ತಾಗಿ ಬಾವಿ ಇದೆ ಎಂದರೆ ಸರಿಯಲ್ಲ. ಆ ಬಾವಿಯ ನೀರನ್ನು ಸಾರ್ವಜನಿಕರು ಬಳಸುತ್ತಿದ್ದಾರೆ ಎಂದರೆ ಸಾಕ್ಷಿಯು ಅದು ಪಾಳುಬಿದ್ದಿದೆ ಎಂದು ನುಡಿಯುತ್ತಾರೆ. ನಾನು ವಾದಿ ಪತಿಯ ಸ್ನೇಹಿತನಾದ ಕಾರಣ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

ಅ.ದಾ.3/2023      ಪಿಡಬ್ಲ್ಯೂ-2

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.